No.MAG(3)/NPP/98/2023-2024

No.MAG(3)/NPP/99/2023-2024

ಸ್ಥಾಪನೆ : ೧೯೭೯



# ಹೊಂಗನಸು



ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು-೧೧೬

ಸಂಪುಟ: ೧೩ ಸಂಚಿಕೆ: ೪
Volume: 13 Issue: 4

ಜುಲೈ ೨೦೨೫
July 2025

ಪುಟಗಳು-೮
Pages-8

ವಾರ್ಷಿಕ ಚಂದಾ ರೂ.೨೦/-
Annual Subscription Rs.20/-

ಶ್ರೀ ವಿಶ್ವಾವಸು ಸಂವತ್ಸರ
ಜೇಷ್ಠ-ಆಷಾಢ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೩೨೮೧೨೧೨೩
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕರು
**ಡಾ. ಆರ್. ಲಕ್ಷ್ಮೀನಾರಾಯಣ**
ಗೌರವಾಧ್ಯಕ್ಷರು

**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂರಕ್ಷರು**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ

**ಸಂಯೋಜಕರು**
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

**ಸಂನುಡಿ**

## ಅಗೋ ಕೇಳು, ಇಗೋ ಕೇಳು 'ಗುಪ್ತಗಾರುಡಿ'ಯ ಇಂಚರ

ಮಾನವನ ಜೀವನದಲ್ಲಿ ನಿತ್ಯವೂ ಒಂದಲ್ಲ ಒಂದು ಬದಲಾವಣೆಗೆ ಹೊಂದಿಕೊಳ್ಳಬೇಕಾಗಿದೆ. ಬದಲಾವಣೆ ಬೇಕೋ ಬೇಡವೋ ಅನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. 'ಇಂದು ಇದೇ, ಇಂದು ಹೀಗೇ' 'ಇದಮಿತ್ಥಂ' ಆಗಿಬಿಟ್ಟಿರುವುದು ಅನಿವಾರ್ಯವೋ, ಅನಗತ್ಯವೋ ಅಳವಡಿಸಿಕೊಳ್ಳಲೇಬೇಕು. ಡಿಜಿಟಲೀಕರಣ ಪ್ರಾರಂಭವಾದಾಗ ಅದರ ಗಂಭೀರ ಪರಿಣಾಮಗಳು ನಮಗೆ ಅಷ್ಟೇನೂ ಗೋಚರಿಸಲಿಲ್ಲವಾದರೂ ಇಂದು ಅದು ಆಕ್ಟೋಪಸ್ ತರಹ ನಮ್ಮನ್ನು ಒಂದೊಂದಾಗಿ ಮುಷ್ಟಿಯಲ್ಲಿ ಹಿಡಿದುಕೊಳ್ಳುತ್ತಿದೆ. ಓದುತ್ತಿದ್ದ, ಬರೆಯುತ್ತಿದ್ದ, ಬೆರೆಯುತ್ತಿದ್ದ ನಾವುಗಳು ಮೊಬೈಲ್‌ನ ಅಡಿಯಾಳಾಗಿದ್ದೇವೆ.

ಹಿಂದೆ ನಾವೆಲ್ಲ 'ಅಲ್ಲಾವುದ್ದೀನನ ಅದ್ಭುತ ದೀಪ'ದ ಕಥೆ ಓದುತ್ತಿದ್ದೆವು, ಮಕ್ಕಳಿಗೆ ಹೇಳುತ್ತಿದ್ದೆವು. ಆ ದೀಪದ ಪಾತ್ರೆಯನ್ನು ಉಜ್ಜಿದ ತಕ್ಷಣವೇ ಅಲ್ಲಾವುದ್ದೀನ ಪ್ರತ್ಯಕ್ಷವಾಗಿ ನಾವು ಹೇಳಿದ ಕೆಲಸಗಳನ್ನು ಮಾಡುತ್ತಿದ್ದ. ಆಗ ಅದು 'ನಂಬಿದರೆ ನಂಬಿ, ಬಿಟ್ಟರೆ ಬಿಡಿ' ಅನ್ನಿಸುತ್ತಿತ್ತು. ಈಗ ನಂಬಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಅದೇ 'ಕೃತಕ ಬುದ್ಧಿಮತ್ತೆ'.

**'ಗುಪ್ತಗಾರುಡಿ'**

ಡಿಜಟಲೀಕರಣದ ಪರಾಕಾಷ್ಠತೆ ಮಾನವನ ಅತ್ಯಧಿಕ ಕಾರ್ಯಗಳಲ್ಲಿ, ಚಿಂತನೆಗಳಲ್ಲಿ, ಕ್ಷಮತೆಯಲ್ಲಿ ಹೇಗೆ ವಕ್ಕರಿಸಿದೆಯೆಂದರೆ, ಮಾನವನ ಮೆದುಳಿನಿಂದ ಉತ್ಪತ್ತಿಯಾಗಿ ಮಾನವನನ್ನೇ ಮೂಲೆಗುಂಪು ಮಾಡುತ್ತಿದೆ. ನಮ್ಮ ದಿನನಿತ್ಯದ ಹಾಸುಹೊಕ್ಕುಗಳಲ್ಲಿ ಅಲ್ಲಾವುದ್ದೀನನಂತೆ ಹೇಳಿದ್ದಕ್ಕೆಲ್ಲಾ, ಕೇಳಿದ್ದಕ್ಕೆಲ್ಲಾ ತಾನೇ ಸರ್ವಜ್ಞ ಎನ್ನುವಂತೆ ಕಾರ್ಯನಿರ್ವಹಿಸುತ್ತಿದೆ. ಒಮ್ಮೊಮ್ಮೆ ನಮ್ಮ ನಿರೀಕ್ಷೆ ಮತ್ತು ಕ್ಷಮತೆಗಿಂತ ಉತ್ತಮವಾಗಿ ಕಾರ್ಯ ನಿರ್ವಹಿಸುವ ಸಾಧನವಾಗಿದೆ. ಸಾಹಿತ್ಯ ಕ್ಷೇತ್ರದಲ್ಲಂತೂ ಸಾಹಿತಿಗಳಿಗೆ ಸಡ್ಡು ಹೊಡೆಯುವುದರಲ್ಲಿ, ಅನೇಕ ಬಾರಿ ಸಹಾಯಕನಾಗಿ, ಮಾರ್ಗದರ್ಶಕನಾಗಿ ನಿಂತಿದೆ. 'ಬೆರಳು ತೋರಿದರೆ ಅಂಗೈಯನ್ನೇ ನುಂಗಿದ' ಅನ್ನುವಂತೆ, ಒಂದು ವಿಷಯ ಕೊಟ್ಟರೆ ಅದರ ಮೇಲೆ ಸೂಕ್ತವಾದ ಕವಿತೆಯನ್ನೋ, ಕಥೆಯನ್ನೋ, ವಿಮರ್ಶೆಯನ್ನೋ ಉತ್ತಮ ರೂಪಕ, ಅನುರೂಪಕಗಳೊಂದಿಗೆ ಕೆಲವೇ ಕ್ಷಣಗಳಲ್ಲಿ ತೆರೆದಿಡುತ್ತದೆ. ಯಾವುದೇ ವಿಷಯದಲ್ಲಿ ಏನು, ಎಷ್ಟು, ಹೇಗೆ, ಯಾರಿಂದ ಕಾರ್ಯ ನಡೆದಿದೆ ಎಂಬ ಅಂಶವನ್ನೂ ತಿಳಿಸಿಬಿಡುತ್ತದೆ. ಅಗತ್ಯ ಬಿದ್ದರೆ ಸಂಶೋಧನಾ ಪ್ರಬಂಧವನ್ನೇ ಬರೆಯಬಹುದೇನೋ?!

ಇದಲ್ಲದೆ, ಇತ್ತೀಚೆಗೆ ಒಂದು ಸಾಹಿತ್ಯಕ್ಕೆ ಅನುರೂಪವಾದ ಚಿತ್ರಗಳನ್ನು ಹೊಂದಿಸುವುದು, ಬರೆದ ಕವಿತೆಗಳನ್ನು ಸಂಗೀತ ರೂಪಕ್ಕೆ ಪರಿವರ್ತಿಸುವುದು, ಅದಕ್ಕೆ ರಾಗ, ತಾಳ, ಶ್ರುತಿ ಜೋಡಿಸಿ ಯಾರ ಧ್ವನಿಯಲ್ಲಿ ಬೇಕೋ ಹಾಗೆ ಹಾಡಿಸುವುದು, ನೃತ್ಯರೂಪಕಗಳನ್ನು ವಿವಿಧ ಭಂಗಿಯಲ್ಲಿ ತೋರಿಸುವುದು ಇತ್ಯಾದಿ ..

ಇದನ್ನೆಲ್ಲಾ ಗಮನಿಸಿ ಮುಂದಿನ ದಿನಗಳ ಬಗ್ಗೆ ಚಿಂತನೆ ಮಾಡಿದರೆ, ಸಾಹಿತಿಗಳ, ಕವಿ

ಕಾದಂಬರಿಕಾರರ, ಕಲಾಕಾರರ, ಚಿತ್ರಗಾರರ, ಸಂಗೀತ ನಿರ್ದೇಶಕರ, ಹಾಡುಗಾರರ ಅವಶ್ಯಕತೆಯೇ ಇಲ್ಲವೇನೋ ಅನ್ನುವ ಪರಿಸ್ಥಿತಿ ಬಂದರೂ ಬರಬಹುದು. ಕ್ರಮೇಣ, ಅನುವಾದಕರ, ವಿಮರ್ಶಕರ ಅಗತ್ಯತೆ ಇಲ್ಲವಾಗಬಹುದು. ನಮಗೆ ತಿಳಿದ ಭಾಷೆಯಲ್ಲಿ ಬರೆದು, ಅನ್ಯ ಭಾಷೆ ಬಾರದಿದ್ದರೂ ಆ ಭಾಷೆಯಲ್ಲಿ ಬರೆದಂತೆ ತೋರಿಸಿಕೊಳ್ಳಬಹುದು.

ಇದೆಲ್ಲಾ ನಡೆಯುವುದು ನಮಗೆ ಅಗೋಚರ. ಇಂತಹ 'ಆಪ್'ಗಳು ಸುಲಭವಾಗಿ ದೊರೆಯುತ್ತಿವೆ. ಹಿಂದೆ ಶ್ರೀಕೃಷ್ಣನನ್ನು 'ಗಾರುಡಿಗ' ಎನ್ನುತ್ತಿದ್ದರು. ಹೀಗೆ ಕಣ್ಣಿಗೆ ಕಾಣಿಸಿದೇ ಗಾರುಡಿಗನಂತೆ ಕಾರ್ಯನಿರ್ವಹಿಸುವ ಈ ಡಿಜಿಟಲ್ ಕ್ಷಮತೆಯನ್ನು ' 'ಕೃತಕ ಬುದ್ಧಮತ್ತೆ' ಅನ್ನುವುದಕ್ಕಿಂತ 'ಗುಪ್ತಗಾರುಡಿ' ಎಂದು ನಾಮಕರಣ ಮಾಡಿದರೆ ಸೂಕ್ತವಲ್ಲವೇ?

ಈ ಆವಿಷ್ಕಾರವನ್ನು ಇಂದಿನ ಸಾಹಿತಿಗಳು ಒಪ್ಪಿಕೊಳ್ಳುತ್ತಾರೋ, ಅಪ್ಪಿಕೊಳ್ಳುತ್ತಾರೋ ಅನ್ನುವ ಪ್ರಶ್ನೆಯೇ ಇಲ್ಲ. ಏಕೆಂದರೆ ಈಗಾಗಲೇ ನಾವು ಸಾಮಾಜಿಕ ಜಾಲತಾಣಗಳಲ್ಲಿ ಪದಗಳ ಬದಲು 'ಇಮೋಜಿ', 'ಜಿ ಐ ಎಫ್', ಮೇಲೆ ಕೆಳಗೆ ತೋರುವ ಹೆಬ್ಬೆಟ್ಟು ಚಿನ್ಹೆ, ನಗುವ, ಅಳುವ ಚಿಹ್ನೆ ಇತ್ಯಾದಿಗಳಿಗೆ ಈಗಾಗಲೇ ಮಾರುಹೋಗಿದ್ದೇವೆ ಅಲ್ಲವೇ?

**ಡಾ. ಬೆಳವಾಡಿ ಪ್ರಭಾಕರ್**
ಸಂಪಾದಕರು

## ಇಲ್ಲಿಯವರೆಗೆ ನಡೆದ ಕಾರ್ಯಕ್ರಮಗಳು

### ೦೮/೦೬/೨೦೨೫ ಭಾನುವಾರದಂದು ನಡೆದ ಕಾರ್ಯಕ್ರಮ

**ಕೆ. ಮೋಹನ್ ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ 'ನಾದಯೋಗಿ ಶ್ರೀ ಭೈರವಿ ಕೆಂಪೇಗೌಡರು ದತ್ತಿ' ಅಡಿಯಲ್ಲಿ 'ಭೈರವಿ ರಾಗದಲ್ಲಿ ಗಾಯನ ಸ್ಪರ್ಧೆ'**

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಎಲ್ಲರನ್ನೂ ಸ್ವಾಗತಿಸಿದರು.

ಶ್ರೀಮತಿ ದಿವ್ಯ ಅವರ ಸ್ವಾಗತ ಗೀತೆಯೊಂದಿಗೆ ಸ್ಪರ್ಧಾ ಕಾರ್ಯಕ್ರಮ ಪ್ರಾರಂಭವಾಯಿತು. ನಂತರ ಮುಖ್ಯ ಅತಿಥಿಗಳಾದ ಶ್ರೀ ಮೋಹನ್ ದೇವ್ ಆಳ್ವ, ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ, ಸ್ಪರ್ಧೆಯ ತೀರ್ಪುಗಾರರಾದ ಸಂಗೀತ ವಿದುಷಿ ಶ್ರೀಮತಿ ಸುಮಾ ರಾಣಿ ಮತ್ತು ವಿದ್ವಾನ್ ವಿಷ್ಣುಶಾಸ್ತ್ರೀ ಎಚ್.ಕೆ. ಜೊತೆಯಾಗಿ ಜ್ಯೋತಿ ಬೆಳಗಿಸಿದರು.

ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ದತ್ತಿಯ ವಿವರವಾದ ಪರಿಚಯ ಮಾಡಿದರು.

ಮುಖ್ಯ ಅತಿಥಿಗಳಾದ ಶ್ರೀ ಮೋಹನ್ ದೇವ್ ಆಳ್ವ ಅವರು ವಿಧ್ಯುಕ್ತವಾಗಿ ಸ್ಪರ್ಧೆಯ ಉದ್ಘಾಟನಾ ಮಾತುಗಳನ್ನು ಆಡಿ, ಸ್ಪರ್ಧಿಗಳಿಗೆ ಶುಭ ಕೋರಿದರು.

ತೀರ್ಪುಗಾರರಲ್ಲಿ ಒಬ್ಬರಾದ ವಿದುಷಿ ಸುಮಾ ರಾಣಿ ಸ್ಪರ್ಧಿಗಳಿಗೆ ಇಂದಿನ ಭೈರವಿ ರಾಗದ ಗಾಯನ ಸ್ಪರ್ಧೆಯ ನಿಯಮ ನಿಬಂಧನೆಗಳ ಬಗೆಗೆ ತಿಳಿಸಿ ಕೆಲವು ಕಿವಿಮಾತುಗಳನ್ನು ಆಡಿದರು.

ಅನೇಕ ಕಡೆಗಳಿಂದ ಬಹಳ ಉತ್ಸಾಹದಿಂದ ಬಂದಿದ್ದ ಹತ್ತು ಸ್ಪರ್ಧಿಗಳು ತಮ್ಮ ಗಾಯನವನ್ನು ತಮ್ಮ ತಮ್ಮ ಕ್ಷಮತೆಯ ಆಧಾರದ ಮೇಲೆ ಹಾಡಿದರು. ಎಲ್ಲಾ ಸ್ಪರ್ಧಿಗಳಲ್ಲೂ ಈ ಭೈರವಿ ರಾಗದ ಸ್ಪರ್ಶ ಎದ್ದು ಕಾಣುತ್ತಿತ್ತು.



ಬಹುಮಾನ ವಿತರಣೆಗೆ ಮೊದಲು ತೀರ್ಪುಗಾರರು ಸ್ಪರ್ಧಿಗಳ ಪ್ರದರ್ಶನದ ಬಗೆಗೆ ತಮ್ಮ ಅನಿಸಿಕೆಗಳನ್ನು ತಿಳಿಸುತ್ತಾ, ಅವರು ಹೇಗೆ ಇನ್ನೂ ಹೆಚ್ಚಿನ ತಾಲೀಮು ಮಾಡಬಹುದೆಂದು ಸೂಚಿಸಿದರು. ಸ್ಪರ್ಧೆಯಲ್ಲಿ ಕಿಶೋರ ಮತ್ತು ಕಿಶೋರಿಯರು ಭಾಗವಹಿಸಿದ್ದರು.

ಸ್ಪರ್ಧೆಯಲ್ಲಿ ಕೆಳಕಂಡವರು ಬಹುಮಾನ ಪಡೆದರು.

ಪ್ರಥಮ ಬಹುಮಾನ : **ಕುಮಾರಿ ಭುವನ ಎ.**

ದ್ವಿತೀಯ ಬಹುಮಾನ : **ಕುಮಾರ ಆದಿತ್ಯ ಶ್ರೀನಿಧಿ ತಾಯೂರ್**

ತೃತೀಯ ಬಹುಮಾನ : **ಕುಮಾರ ಪ್ರಣವ ಶಿರಗುಪ್ಪ**

ಸಮಾಧಾನಕರ ಬಹುಮಾನ : **ಕುಮಾರ ಚಿರಂತನ್ ಕೆ. ಎಂ.**

ಡಾ. ಬೈರಮಂಗಲ ರಾಮೇಗೌಡ ಇವರ ಅಧ್ಯಕ್ಷೀಯ ನುಡಿಗಳೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಈ ದತ್ತಿಯ ಅಡಿಯಲ್ಲಿ ನೆರೆದವರೆಲ್ಲರಿಗೂ ಸವಿಭೋಜನದ ವ್ಯವಸ್ಥೆ ಮಾಡಲಾಗಿತ್ತು.

## ೧೫/೦೬/೨೦೨೫ ಭಾನುವಾರ ಸಾಯಂಕಾಲ ನಡೆದ ಕಾರ್ಯಕ್ರಮ

**ಬಿ.ಎಂ.ಶ್ರೀ. ಪ್ರತಿಷ್ಠಾನ ಏರ್ಪಡಿಸಿದ್ದ ಪುಸ್ತಕ ಜನಾರ್ಪಣೆ ಕಾರ್ಯಕ್ರಮ**

ಡಾ. ಎಚ್.ಎ. ಸತ್ಯವತಿ ಅವರ ಸಂಶೋಧನಾ ಕೃತಿ 'ಚೌಂಡರಸ – ಒಂದು ಅಧ್ಯಯನ'. ಡಾ. ಬಿ.ಎಂ. ಮಂಜುಳಾ ಅವರ ಪ್ರಾರ್ಥನಾ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಎಲ್ಲರನ್ನೂ ಅದರದಿಂದ ಸ್ವಾಗತಿಸಿದರು.

ಮುಖ್ಯ ಅತಿಥಿಗಳಾಗಿದ್ದ ನಾಡೋಜ ಡಾ. ಹಂಪ ನಾಗರಾಜಯ್ಯನವರು 'ಚೌಂಡರಸ ಒಂದು ಅಧ್ಯಯನ' ಕೃತಿಯನ್ನು ಜನಾರ್ಪಣೆ ಮಾಡಿ ಮಾತನಾಡಿದರು.

**ಕೃತಿಯ ರೂಪ – ಸ್ವರೂಪ**

ಬಿ.ಎಂ.ಶ್ರೀ. ಪ್ರತಿಷ್ಠಾನದಿಂದ ಜನಾರ್ಪಣೆ ಆಗುತ್ತಿರುವ ಈ ಕೃತಿ ನೂರಾನಾಲ್ಕನೆಯದು. ಇದರ ಮುಖಪುಟದ ವಿನ್ಯಾಸವನ್ನು ನೋಡಿಯೇ ಮನಸ್ಸಿಗೆ ಉಲ್ಲಾಸವನ್ನು ನೀಡುವಷ್ಟು ಶೋಭಾಯಮಾನವಾಗಿದೆ. ಲೇಖಕಿ ಡಾ. ಸತ್ಯವತಿ ಅಭಿನಂದನಾರ್ಹರು. ಮುಖಪುಟಕ್ಕಿಂತಲೂ ಸೊಗಸಾಗಿರುವುದು ಅದರಲ್ಲಿರುವ ಒಳಪುಟಗಳು, ಅದರಲ್ಲಿರುವ ಸಂಗ್ರಹ, ಒಕ್ಕಣೆ ಓದಿದರೆ ಪುಸ್ತಕವನ್ನು ಕೆಳಗಿಡದೆ ಹೃದಯದ ಪಕ್ಕದಲ್ಲೇ ಇಟ್ಟುಕೊಳ್ಳಬೇಕು ಅನ್ನಿಸುವಷ್ಟು ಉತ್ಕೃಷ್ಟ ಎಂಬ ಮೆಚ್ಚುಗೆಯ ಮಾತುಗಳನ್ನು ಮನದಾಳದಿಂದ ನುಡಿದರು. ಇದರ ರೂಪ, ಸ್ವರೂಪಗಳನ್ನು ನೋಡಿದರೆ ಲೇಖಕಿ ಡಾ. ಸತ್ಯವತಿಯವರು ಎಷ್ಟು ಆಳವಾದ ಅಷ್ಟೇ ಅಲ್ಲ ತೂಕದ ಅಧ್ಯಯನ ಮಾಡಿದ್ದಾರೆ ಅನ್ನಿಸುತ್ತದೆ. ಡಾ. ರಂ.ಶ್ರೀ. ಮುಗಳಿಯವರ ಮಾರ್ಗದರ್ಶನದಲ್ಲಿ ಈ ಕೃತಿ ಬರೆದಿದ್ದಾರೆ ಎಂದರೆ ಇದಕ್ಕಿಂತ ಒಳ್ಳೆಯ ಪ್ರಶಂಸೆ ಬೇಕಿಲ್ಲ ಎಂದರು.

**ಅದ್ಭುತವಾದ ನಿರೂಪಣೆ ಮತ್ತು ಭಾಷಾ ಶೈಲಿ**

ಇಂದು ಜನಾರ್ಪಣೆಯಾದ ಕೃತಿಯ ಬಗೆಗೆ ಖ್ಯಾತ ವಿಮರ್ಶಕಿಯಾದ ಡಾ. ಎಲ್.ಜಿ. ಮೀರಾರವರು ಬೆಳಕು ಚೆಲ್ಲಿದರು. ಈ ಕೃತಿ ಎಷ್ಟು ದೀರ್ಘವಾಗಿದೆ ಮತ್ತು ಅಷ್ಟೇ ಆಳವಾದ ವಿಷಯ ಸಂಗ್ರಹಗಳೊಂದಿಗೆ ತುಂಬಿದೆ. ಎಂದರೆ, ಕೇವಲ ಈ ಪುಸ್ತಕದಲ್ಲಿ ಅಡಕವಾಗಿರುವ ಗಾಢವಾದ ವಿಷಯಗಳ ಮೇಲೆಯೇ ಇಬ್ಬರು ಅಧ್ಯಯನ ಮಾಡಿ ಪ್ರೌಢ ಪ್ರಬಂಧವನ್ನು ಬರೆಯಬಹುದು. ಇದರಲ್ಲಿ ಅನೇಕ ಚರಿತೆಗಳ ಅಧ್ಯಯನದ ಪ್ರಭಾವ ಎದ್ದು ಕಾಣುತ್ತದೆ. ಈ ಕೃತಿಯ ಕೇಂದ್ರಬಿಂದು 'ಚೌಂಡರಸ' ಕವಿಯು ಸಾಹಿತ್ಯ ಕ್ಷೇತ್ರದಲ್ಲಿ ಅಲ್ಲೋ ಇಲ್ಲೋ ಪ್ರತ್ಯಕ್ಷವಾಗಿರುವುದು ಬಿಟ್ಟರೆ, ಇಂತಹ ಧೀಮಂತ ಕವಿಯ ಬರಹಗಳಿಗೆ ಉಳಿದ ಕವಿಗಳಿಗೆ ಸಿಗುವ ಮನ್ನಣೆ ಸಿಗದಿರುವುದು ಆಶ್ಚರ್ಯವನ್ನು ಉಂಟುಮಾಡುತ್ತದೆ. ಇದರಲ್ಲಿ ನನಗೆ ಬಹಳ ಪ್ರಮುಖವಾಗಿ ಎದ್ದು ಕಂಡದ್ದು



ಪಂಡರಾಪುರದ ವಿಠ್ಠಲನ ವ್ಯಾಖ್ಯಾನ ಉಳಿದವರಿಗಿಂತ ಉತ್ತಮವಾದದ್ದು ಎನ್ನುತ್ತಾ ಇದರಲ್ಲಿನ ನಿರೂಪಣೆ, ಭಾಷಾ ಬಳಕೆಯ ಶೈಲಿ ಅದ್ಭುತವಾದದ್ದು ಎಂದರು.

ಈ ಲೇಖಕರ ಇನ್ನೊಂದು ವಿಶೇಷವೆಂದರೆ, ಇತರರು ಒಂದು ವಿಷಯದ ಮೇಲೆ ಹೇಗೆ ಬರೆದಿದ್ದಾರೆ, ಅದರ ಮೇಲೆ ತನ್ನ ಅಭಿಪ್ರಾಯವೇನು, ಹಾಗೇ ತನ್ನ ಬರವಣಿಗೆಯ ಮೇಲೆ ಇತರರ ಅಭಿಪ್ರಾಯವೇನು ಎಂಬುದನ್ನು ಮನಗಂಡು ಕೃತಿಯನ್ನು ನಿರ್ಮಿಸುವುದು. ಇದು ನಿಜವಾಗಿಯೂ ಒಂದು ಅಪರೂಪದ ಗುಣಧರ್ಮ ಎಂದರು.

ಲೇಖಕಿ ಡಾ. ಎಲ್.ಜಿ. ಸತ್ಯವತಿಯವರು ಮಾತನಾಡುತ್ತಾ ತಾವು ಬಾಲ್ಯದಲ್ಲಿ ಹೇಗೆ ಪೋಲಿಯೋ ವ್ಯಾಧಿಗೆ ತುತ್ತಾದೆ, ನಂತರ ತಂದೆಯವರ ಪ್ರೋತ್ಸಾಹದಿಂದ ಕನ್ನಡ ಸಾಹಿತ್ಯಕ್ಕೆ ಪ್ರವೇಶಿಸಿದ ವಿಷಯವನ್ನು ಸಭೆಗೆ ತಿಳಿಸಿದರು. ಇಂದು ಜನಾರ್ಪಣೆಯಾದ ಕೃತಿ ಬರೆಯುವುದಕ್ಕೆ ನಾನು ಕೇವಲ ಕನ್ನಡ ಭಾಷೆಯ ಮೇಲೆ ಅವಲಂಬಿತವಾಗಲಿಲ್ಲ. ನನಗೆ ಸಂಸ್ಕೃತವೂ ಬರುತ್ತಿತ್ತು, ಜೊತೆಗೆ ನನ್ನ ಮಾರ್ಗದರ್ಶಕರಾದ ಡಾ. ಮುಗಳಿಯವರಿಗೆ ಮರಾಠಿ ಬರುತ್ತಿದ್ದರಿಂದ ಅಭಂಗಗಳನ್ನು ಅಧ್ಯಯನ ಮಾಡಿ ಬರೆಯಲು ಅನುಕೂಲವಾಯಿತು ಎಂದು ನುಡಿದರು.

**ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಚಿರಋಣಿ**

ಈ ಕೃತಿಯ ಪ್ರಕಟಣೆಯ ಸಂಪೂರ್ಣ ಜವಾಬ್ದಾರಿ ಹೊತ್ತವರು ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು. ಮುಖಪುಟದ ವಿನ್ಯಾಸ ತಯಾರಿಸುವ ಮೊದಲು ರಾಮೇಗೌಡರು ಈ ಕೃತಿಯ ಕೇಂದ್ರಬಿಂದುವಾದ 'ಚೌಂಡರಸ' ಕವಿಯ ಬಗ್ಗೆ ಕೆಲವು ವಿವರಗಳನ್ನು ನನ್ನಿಂದ ತಿಳಿದುಕೊಂಡು ಅದಕ್ಕೆ ಅನುರೂಪವಾದ ಚಿತ್ರಣವನ್ನು ಬಿಂಬಿಸಿದ್ದಾರೆ. ಕೃತಿ ಬರೆದಿದ್ದಷ್ಟೇ ನನ್ನ ಕೆಲಸ. ಉಳಿದದ್ದೆಲ್ಲಾ ಪ್ರತಿಷ್ಠಾನದ ಪರವಾಗಿ ಅಚ್ಚು ತಿದ್ದುವುದನ್ನೂ ಸೇರಿದಂತೆ ಮಾಡಿದವರು ಅವರು. ಅವರಿಗೆ ನಾನು ಚಿರಋಣಿ. ಇಂದು ನನ್ನ ಗುರುಗಳಾದ ಡಾ. ಹಂಪನಾ ಅವರ ಅಮೃತಹಸ್ತದಿಂದ ಜನಾರ್ಪಣೆ ಆಗಿರುವುದು ಯೋಗಾಯೋಗ ಅಂದರು.

**ವಿಶ್ಲೇಷಣೆ, ವಿವೇಚನೆ ಮತ್ತು ವಿಚಾರಧಾರೆ**

ಮತ್ತೋರ್ವ ಅತಿಥಿಗಳಾಗಿ ಮಾತನಾಡುತ್ತಾ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು ೧೯೮೫ರಲ್ಲೇ ಪ್ರಕಟವಾಗಬೇಕಾಗಿದ್ದ ಈ ಕೃತಿ ಇಲ್ಲಿಯವರೆಗೆ ಏಕೆ ಆಗಿರಲಿಲ್ಲ ಎಂದು ತಡಕಾಡುತ್ತಿದ್ದೆ. ಅದಕ್ಕೆ ನನಗೆ ಇಂದು ಸಮಂಜಸ ಉತ್ತರ ಸಿಕ್ಕಿದೆ. ಬಹುಶಃ ಇಂತಹ ಉತ್ಕೃಷ್ಟ ಗ್ರಂಥ ಬಿ.ಎಂ.ಶ್ರೀ. ಪ್ರತಿಷ್ಠಾನದಿಂದಲೇ ಪ್ರಕಟವಾಗಬೇಕೆಂದು ದೈವೀಕೃಪೆ ಇತ್ತೋ ಏನೋ? ಇದು ನಮ್ಮ ಪ್ರತಿಷ್ಠಾನಕ್ಕೆ ಸಂದ ಗೌರವ ಎಂದರು. ಈ ಕೃತಿಯಲ್ಲಿ ನನಗೆ ಮೆಚ್ಚುಗೆಯಾಗಿದ್ದು ಲೇಖಕರ ವಿಶ್ಲೇಷಣೆ, ವಿವೇಚನೆ ಮತ್ತು ವಿಚಾರಧಾರೆ ಎಂದು ಬಣ್ಣಿಸಿದರು. ಕಾಡಿನ ಮಧ್ಯೆ ದಾರಿ ಮಾಡಿಕೊಂಡು ಹೋಗುವ ಕ್ಲಿಷ್ಟ ಕೆಲಸವನ್ನು ಡಾ. ಸತ್ಯವತಿ ಮಾಡಿದ್ದಾರೆ. ಇದಕ್ಕಿಂತ ಉತ್ತಮವಾದ ಕೃತಿ ಬರಲಿಕ್ಕಿಲ್ಲ ಎಂದು ಶ್ಲಾಘನೆಯ ನುಡಿಗಳನ್ನು ಆಡಿದರು.

**ಇದೊಂದು ಮೇರು ಸಾಹಿತ್ಯ**

ಅಧ್ಯಕ್ಷೀಯ ಮಾತುಗಳನ್ನಾಡುತ್ತಾ ಡಾ. ಬೈರಮಂಗಲ ರಾಮೇಗೌಡರು ಡಾ. ಸತ್ಯವತಿಯವರ ಈ ಕೃತಿ ಒಬ್ಬ ಕವಿಯ ಸಮಗ್ರ ಚಿತ್ರಣವನ್ನು ಬಿಂಬಿಸುವ ಮೇರು ಸಾಹಿತ್ಯ. ಅದರಲ್ಲೂ ಡಾ. ರಂ.ಶ್ರೀ. ಮುಗಳಿಯಂತಹವರ ಮಾರ್ಗದರ್ಶನದಲ್ಲಿ ಮಾಡಿದ ಪಿಎಚ್.ಡಿ. ಪ್ರೌಢ ಪ್ರಬಂಧದ ಮುಂದುವರೆದ ಭಾಗ. ಇದರಿಂದ ಹಿಂದಿನ ಸಂಶೋಧನಾ ಕ್ಷಮತೆಗೂ ಇಂದಿನದಕ್ಕೂ ಹೋಲಿಸಿ ಆಗಿನ ಗುಣಮಟ್ಟ ಹೇಗಿತ್ತು ಎಂಬುದರ ನಿದರ್ಶನ ಎಂದು ಹೇಳಿ ಲೇಖಕಿಯನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಈ ಕೃತಿಯನ್ನು ಓದಿ ಪ್ರೇರಿತರಾಗಿದ್ದ ದಿವಂಗತ ಡಾ. ಪಿ.ವಿ. ನಾರಾಯಣ ಅವರನ್ನು ನೆನಪಿಸಿಕೊಂಡರು.

ನಿರೂಪಣೆಯ ಕಾರ್ಯವನ್ನು ಉತ್ತಮವಾಗಿ ನಿರ್ವಹಿಸಿದ ಪ್ರೊ.ಚಂದ್ರಶೇಖರ ನಾದೂರು ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ೧೮/೦೬/೨೦೨೫, ಬುಧವಾರ ಸಾಯಂಕಾಲದ ಕಾರ್ಯಕ್ರಮ

'ಶ್ರೀಮತಿ ವಿಶಾಲಾಕ್ಷಮ್ಮ ಮತ್ತು ಶ್ರೀ ಬಿ.ಎಸ್. ಶಾಮಣ್ಣ ಸ್ಮರಣಾರ್ಥ ದತ್ತಿ'ಯ ಉದ್ಘಾಟನೆ ಮತ್ತು ಅದರ ಅಡಿಯಲ್ಲಿ 'ಕನ್ನಡ ಸಾಹಿತ್ಯ – ಇತ್ತೀಚಿನ ಬೆಳವಣಿಗೆ' ವಿಷಯದ ಮೇಲೆ ಹಿರಿಯ ವಿದ್ವಾಂಸ ಡಾ. ಆರ್. ಶೇಷಶಾಸ್ತ್ರಿ ಇವರಿಂದ ವಿಚಾರ ಮಂಡನೆ.

ಪ್ರಾರಂಭದಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕೋಶಾಧಿಕಾರಿಗಳಾದ ಪ್ರೊ. ಚಂದ್ರಶೇಖರ ನಾದೂರು ಅವರು ಈ ನೂತನ ದತ್ತಿಯ ಅನುಷ್ಠಾನದ ಬಗೆಗೆ ವಿವರಗಳನ್ನು ಕೊಟ್ಟರು. ನಮ್ಮ ಪ್ರತಿಷ್ಠಾನದ ಸದಸ್ಯರೇ ಆದ ಡಾ. ಶ್ಯಾಮಲಾ ರತ್ನಕುಮಾರಿ ಅವರು ತಮ್ಮ ಪೋಷಕರ ಹೆಸರಿನಲ್ಲಿ ಈ ದತ್ತಿಯನ್ನು ಪ್ರತಿಷ್ಠಾಪಿಸಿ ಪ್ರತಿ ವರ್ಷ ಜೂನ್ ೧೮ನೇ ತಾರೀಖಿನಂದು ನಡೆಸಬೇಕೆಂದು ಬಯಸಿದ್ದಾರೆ. ಈ ದಿನ ವಿಶೇಷವಾದದ್ದು ಏಕೆಂದರೆ ಇದರ ಉದ್ಘಾಟನೆ ನಡೆಯುತ್ತಿದೆ ಎನ್ನುತ್ತಾ ಸಭೆಯಲ್ಲಿ ನೆರೆದವರೆಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿದರು.

ಉಪನ್ಯಾಸಕರಾದ ಡಾ. ಆರ್. ಶೇಷಶಾಸ್ತ್ರಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ, ಚಂದ್ರಶೇಖರ ನಾದೂರು, ದತ್ತಿ ಸ್ಥಾಪಕರ ಬಳಗದವರು ಮೊದಲು ಶ್ರೀಮತಿ ವಿಶಾಲಾಕ್ಷಮ್ಮ ಮತ್ತು ಶ್ರೀ ಬಿ.ಎಸ್.ಶಾಮಣ್ಣ ದಂಪತಿಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಡಾ. ಶ್ಯಾಮಲಾ ರತ್ನಕುಮಾರಿ ಅವರು ಬರೆದ 'ನನ್ನ ಮಾತೃಶ್ರೀ ಶ್ರೀಮತಿ ವಿಶಾಲಾಕ್ಷಮ್ಮ ಶಾಮಣ್ಣ' ಮತ್ತು 'ಮಾನ್ಯಖೇಟದ ರಾಷ್ಟ್ರಕೂಟರು' ಎಂಬ ಕೃತಿಗಳ ಜನಾರ್ಪಣೆಯೂ ನಡೆಯಿತು.



ವಿದುಷಿ ಸುಮಲತಾ ಮಂಜುನಾಥ ಅವರಿಂದ ವಿಷ್ಣು ಸ್ತುತಿ ಪ್ರಾರ್ಥನಾ ಗೀತೆ ನಡೆಯಿತು. ಡಾ. ಎಸ್.ಎಲ್. ಮಂಜುನಾಥ ಅವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ಆತ್ಮೀಯವಾಗಿ ಸ್ವಾಗತಿಸಿದರು. ಹಾಗೆಯೇ ದತ್ತಿ ಸ್ಥಾಪಕರಾದ ಡಾ. ಶ್ಯಾಮಲಾ ಮತ್ತು ಉಪನ್ಯಾಸಕರಾದ ಡಾ. ಆರ್. ಶೇಷಶಾಸ್ತ್ರಿ ಶ್ಯಾಮಲಾ ಅವರ ಪರಿಚಯವನ್ನು ಮಾಡಿದರು. ಶ್ಯಾಮಲಾ ಮೇಡಂ ಅವರು ಇತಿಹಾಸ ಕ್ಷೇತ್ರದಲ್ಲಿ ಇತಿಹಾಸ ನಿರ್ಮಿಸಿದವರು. ಶೇಷಶಾಸ್ತ್ರಿ ಇವರು ಸಾಹಿತ್ಯ ಹಾಗೂ ಲಾಲಿತ್ಯ ಸಂಪನ್ನರು ಎಂದು ಬಣ್ಣಿಸಿದರು. ಜ್ಯೋತಿ ಬೆಳಗುವುದರೊಂದಿಗೆ ನೂತನ ದತ್ತಿಯ ಉದ್ಘಾಟನೆ ನಡೆಯಿತು. ವೇದಿಕೆಯ ಮೇಲಿದ್ದ ಗಣ್ಯರೆಲ್ಲ ಕೈ ಜೋಡಿಸಿದರು.

ದತ್ತಿ ಸ್ಥಾಪಕಿ ಮತ್ತು ಲೇಖಕಿ ಡಾ. ಶ್ಯಾಮಲಾ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ೨೦೧೪ರಲ್ಲಿ ತಂದೆಯವರ ಶತಮಾನೋತ್ಸವ ಸಂದರ್ಭದಲ್ಲಿ ಮೊದಲಿನ ಪುಸ್ತಕ ಹೊರಬಂತು. ಇವತ್ತಿನದು ಎರಡನೇ ಮುದ್ರಣ ಎಂದು ಬಹಳ ಭಾವನಾತ್ಮಕವಾಗಿ

ನುಡಿದರು. ನಂತರ ಅವರ ಎರಡೂ ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಯಿತು.

**ತುಲನಾತ್ಮಕ ಸಾಹಿತ್ಯ ಇತಿಹಾಸ ರಚನೆಯ ಅಗತ್ಯ**

ಕನ್ನಡ ಸಾಹಿತ್ಯದ ಇತಿಹಾಸದ ಬಗ್ಗೆ ಅನೇಕ ಪುಸ್ತಕಗಳು ಲಭ್ಯವಿದೆ. ಆದರೆ ಅದರಲ್ಲಿ ಯಾವುದೂ ತುಲನಾತ್ಮಕ ಅಂಶವನ್ನು ಒಳಗೊಂಡಿಲ್ಲ. ಕನ್ನಡ ಸಾಹಿತ್ಯ ಇತರೇ ಭಾಷೆಗಳ ಇತಿಹಾಸಕ್ಕೆ ಹೋಲಿಸಿದರೆ ಹೇಗೆ ಬೆಳೆದು ಬಂದಿದೆ ಎಂದು ನೋಡುವ ಬಗ್ಗೆ ನಾನು ಇಂದಿನ ಉಪನ್ಯಾಸದಲ್ಲಿ ಬೆಳಕು ಚೆಲ್ಲುತ್ತೇನೆ. ಅದರಲ್ಲೂ ತೆಲುಗು ಮತ್ತು ತಮಿಳು ಭಾಷೆಗಳಿಗೆ ಆದ್ಯತೆ ನೀಡುತ್ತೇನೆ ಎಂದರು.

ತಮಿಳು ಸಾಹಿತ್ಯ ಚರಿತ್ರೆಯ ಅವಲೋಕನ ಮಾಡಿದರೆ ಅಲ್ಲಿ ಭಾವನಾತ್ಮಕ ಅಭಿವ್ಯಕ್ತಿ ಕಂಡು ಬಂದರೆ, ತೆಲುಗು ಸಾಹಿತ್ಯದ ಇತಿಹಾಸ ಪುಟಗಳು ಈ ಅಂಶವನ್ನು ವ್ಯಕ್ತಪಡಿಸಿಲ್ಲ. ಅದರಲ್ಲಿ ಜನರು ಬರೆದ ಕವಿತೆ ಕಥೆಗಳ ಆಧಾರದ ಮೇಲೆ ಚರಿತ್ರೆ ನಿರ್ಮಾಣವಾದಂತೆ ಕಂಡುಬರುತ್ತದೆ. ಆಗಿನ ಕೃಷ್ಣದೇವರಾಯನ ಆಸ್ಥಾನ ಕವಿಗಳ ಸಾಹಿತ್ಯದ ಮೇಲೆಯೇ ಹೆಚ್ಚು ಅವಲಂಬಿತವಾಗಿರಬಹುದು ತೆಲುಗು ಸಾಹಿತ್ಯದ ಚರಿತ್ರೆ ಎಂಬ ಭಾವನೆ ಮೂಡುತ್ತದೆ. ಈ ಅಂಶಗಳಿಗೆ ಹೋಲಿಸಿದರೆ ಅದೇಕೋ ನಮ್ಮ ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೆ ಇತಿಹಾಸಕಾರರು ಲಕ್ಷ್ಯ ಕೊಟ್ಟಂತೆ ಕಾಣುವುದಿಲ್ಲ. ಹಲ್ಮಿಡಿ ಶಾಸನಕ್ಕೂ ಮೊದಲು ಕನ್ನಡ ಸಾಹಿತ್ಯ ಇತ್ತು ಎನ್ನುವುದನ್ನು ಇತಿಹಾಸ ತಜ್ಞರು ಒಪ್ಪುವುದೇ ಕಷ್ಟ. ನಾನು 'ಕವಿರಾಜಮಾರ್ಗ' ಬೇರೆ ಭಾಷೆಗಳ ಜನರ ಮೇಲೆ ಹೇಗೆ ಪ್ರಭಾವ ಉಂಟು ಮಾಡಿರಬಹುದು ಎಂದು ಅಧ್ಯಯನ ಮಾಡಿದ್ದೇನೆ.

**ಕವಿರಾಜ ಮಾರ್ಗ ಇತರ ಭಾಷಿಕರಿಗೆ ರಾಜಮಾರ್ಗ**

'ಕವಿರಾಜಮಾರ್ಗ' ಕೃತಿ ಕೇವಲ ಕನ್ನಡಿಗರ ಮೇಲಷ್ಟೇ ಅಲ್ಲ, ಆಗಿನ ಆಂಧ್ರದ ಭಾಷಾ ಪ್ರಿಯರ ಮೇಲೂ ಪ್ರಭಾವ ಬೀರಿರುವುದನ್ನು ಕಂಡಿದ್ದೇನೆ. ಜತೆಗೆ ಅದು ತೆಲುಗು ಭಾಷೆಯ ಸಾಹಿತಿಗಳಿಗೂ ರಾಜಮಾರ್ಗ ಆಗಿತ್ತು ಅನ್ನುವ ಅಂಶವನ್ನು ಮನಗಂಡಿದ್ದೇನೆ. ಅವರು ಛಂದಸ್ಸನ್ನು 'ಕವಿಜನಾಶ್ರಯ' ಎಂದು ಕರೆಯುತ್ತಿದ್ದರು.

ನಾವು ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಯಾವುದೇ ಸಾಹಿತ್ಯ ರಚನೆ ಆಯಾ ಕಾಲದ ಓದುಗನ ಇಚ್ಛೆಗೆ ಅನುಗುಣವಾಗಿತ್ತೇ ಎಂಬುದು. ಇದನ್ನು ಇತಿಹಾಸಕಾರರು ಎತ್ತಿ ತೋರಿಸಬೇಕು. ಈ ಮಾತನ್ನು ಪಂಪ ಬಲ್ಲವನಾಗಿದ್ದ ಎಂದರು.

ಅಧ್ಯಕ್ಷೀಯ ಮಾತುಗಳನ್ನಾಡುತ್ತಾ ಡಾ. ಬೈರಮಂಗಲ ರಾಮೇಗೌಡ ಅವರು ಉಪನ್ಯಾಸಕ ಡಾ. ಶೇಷಶಾಸ್ತ್ರಿ ಅವರ ಬಗ್ಗೆ ಅಭಿಮಾನದಿಂದ ಹೇಳುತ್ತಾ ಈ ವ್ಯಕ್ತಿಯ ಹೃದಯ ಸಾಹಿತ್ಯ ಆದರೆ ಆಸಕ್ತಿ ಚರಿತ್ರೆ ಎಂದರು. ಒಂದು ಕಡೆ ನಾಡೋಜ ಹಂಪನಾ ಅವರೇ ಹೇಳಿದ್ದಾರೆ, "ಶಿಲಾಶಾಸನದ ಬಗ್ಗೆ ಅಧ್ಯಯನ ಮಾಡುವವರು ಮೊದಲು ಶೇಷಶಾಸ್ತ್ರಿ ಅವರ ಗ್ರಂಥಗಳನ್ನು ಓದಲಿ" ಎಂದು. ಚೆನ್ನಾಗಿ ಸಾಹಿತ್ಯ ಬಲ್ಲವನೇ ಸಾಹಿತ್ಯಕ್ಕೆ ಸಂಬಂಧಿಸಿದ ಚರಿತ್ರೆ ಬರೆಯಲು ಪರಿಣಿತ ಎಂಬುದಕ್ಕೆ ಇವರೇ ಸಾಕ್ಷಿ ಎಂದರು.

ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರ ವಂದನಾರ್ಪಣೆಯೊಂದಿಗೆ ಚೊಚ್ಚಲು ಉಪನ್ಯಾಸ ಕಾರ್ಯಕ್ರಮ ಮುಕ್ತವಾಯಿತು.

## ದಿನಾಂಕ ೨೫/೦೬/೨೦೨೫, ಬುಧವಾರ ಸಾಯಂಕಾಲ ನಡೆದ ಕಾರ್ಯಕ್ರಮ

ಶ್ರೀಮತಿ ಎಸ್.ಕೆ. ಪ್ರೇಮ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ದತ್ತಿ ಆಶ್ರಯದಲ್ಲಿ 'ಅಲಕ್ಷಿತ ವಚನಕಾರ್ತಿಯರ ವಚನಗಳೊಂದಿಗೆ – ಒಂದು ಅನುಸಂಧಾನ' ವಿಷಯದ ಮೇಲೆ ಸರಕಾರೀ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪುರ ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರು ಮತ್ತು ಕವಿಗಳಾದ ಡಾ. ಟಿ. ಯಲ್ಲಪ್ಪ ಅವರಿಂದ ವಿಚಾರ ಮಂಡನೆ.

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ದತ್ತಿಯ ಒಂದು ವಿಹಂಗಮ ನೋಟವನ್ನು ಇತ್ತರು.

ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ.ಶಾಂತರಾಜು ಉಪನ್ಯಾಸಕ ಡಾ. ಯಲ್ಲಪ್ಪ ಅವರನ್ನು ಪರಿಚಯಿಸಿ ಕಾರ್ಯಕ್ರಮದಲ್ಲಿ ಭಾಗಿಯಾದವರೆಲ್ಲರನ್ನೂ ಆದರಿಂದ ಸ್ವಾಗತಿಸಿದರು.



**ಅಲಕ್ಷತೆಗೆ ಸಾಮಾಜಿಕ ಸಾಂದರ್ಭಿಕ ಕಾರಣಗಳಿರಬಹುದೇ?**

ಡಾ. ಯಲ್ಲಪ್ಪನವರು ಉಪನ್ಯಾಸ ಪ್ರಾರಂಭಿಸುತ್ತಾ ಅನೇಕ ವಚನಕಾರರು, ವಚನಕಾರ್ತಿಯರು ಅಲಕ್ಷಿತವೋ ಅಥವಾ ನಿರ್ಲಕ್ಷಿತವೋ ಎಂದು ನಾವು ಅಂದುಕೊಂಡರೂ ಬಸವಣ್ಣ, ಅಲ್ಲಮಪ್ರಭು ಮುಂತಾದವರ ವಚನಗಳ ಪ್ರಭಾವದಲ್ಲಿ ಕೆಲವರ ವಚನಗಳು ಪ್ರವರ್ಧಮಾನಕ್ಕೆ ಬರದೇ ಹೋಗಿರಬಹುದು. ಆದರೆ ಸಮಾಧಾನದ ಸಂಗತಿಯೆಂದರೆ ಇಂದಿನ ಅನೇಕ ವಿದ್ಯಾರ್ಥಿಗಳು ತಮ್ಮ ಸಂಶೋಧನೆಗೆ ಇಂತಹ ಅಲಕ್ಷಿತ ವಚನಗಳ ಅಧ್ಯಯನ ಕೈಕೊಂಡಿರುವುದು. ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮನಂತಹ ಮೂವತ್ತುಮೂರಕ್ಕೂ ಹೆಚ್ಚು ವಚನಕಾರ್ತಿಯರು ಇದ್ದರು ಎಂಬ ಅಂಶ ಬೆಳಕಿಗೆ ಬಂದಿದೆ. ಅವರು ಸೃಷ್ಟಿಸಿದ ವಚನಗಳ ಸಂಖ್ಯೆಯೇ

ಮುಖ್ಯವಲ್ಲ. ಸ್ತ್ರೀ ಸಂವೇದನೆಯ ಬಗ್ಗೆ ಕೇವಲ ಒಂದೇ ಒಂದು ವಚನ ಬರೆದ ವಚನಕಾರ್ತಿಯೂ ಆ ವಚನದ ಪ್ರಭಾವದಿಂದ ಈ ಪಟ್ಟಿಯಲ್ಲಿ ಸೇರುತ್ತಾರೆ. ಈಗಲೂ ಅನೇಕರು ವಚನಗಳನ್ನು ಬರೆಯುತ್ತಿದ್ದಾರೆ.

ಆಗಿನ ಗುರುತಿಸಿಲ್ಲದ ವಚನಕಾರ್ತಿಯರೂ ಹೆಸರಾಂತ ವಚನಕಾರರಂತೆಯೇ ಉಪಮೆಗಳನ್ನು, ರೂಪಕಗಳನ್ನು ತಮ್ಮ ವಚನದಲ್ಲಿ ಬಳಸಿರುವುದು ಉಂಟು ಎನ್ನುತ್ತಾ ಅನೇಕ ಅಂದಿನ ಕೆಲವು ವಚನಗಳನ್ನು ಸಭೆಯ ಮುಂದಿಟ್ಟು ಅಲಕ್ಷಿತ ವಚನಕಾರ್ತಿಯರು ಯಾವುದೇ ಕಾರಣಕ್ಕೂ ಉಳಿದವರಿಗಿಂತ ಹಿಂದೆ ಇರಲಿಲ್ಲ. ಆಗಿನ ಸಾಮಾಜಿಕ ವಾತಾವರಣದಲ್ಲಿ ಅವರುಗಳು ಪ್ರಕಾಶಕ್ಕೆ ಬರದೇ ಇರಬಹುದು ಎಂದರು.

**ಮೆರೆಸುವ ಸರಿಸುವ ಮನೋಧರ್ಮ**

ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡರು ಮಾತನಾಡುತ್ತಾ ಉಪನ್ಯಾಸದ ವಿಷಯಕ್ಕೆ ಅಂಟಿಕೊಂಡು ಬಹಳ ಮಾರ್ಮಿಕವಾಗಿ ಚರ್ಚಿಸಿದ್ದಾರೆ. ಅವರಿಗೆ ಅಭಿನಂದನೆಗಳು ಎಂದರು. ಕೇವಲ ಕೀರ್ತಿ, ಪ್ರಶಸ್ತಿ ಗಳಿಸಿದವರಷ್ಟೇ ಶ್ರೇಷ್ಠ ಸಾಹಿತಿಗಳಲ್ಲ. ಕಾರಣಾಂತರದಿಂದ ಕೆಲವರು ಹಾಗೇ ಉಳಿದಿರಬಹುದು. ನಮ್ಮ ಸಾಮಾಜಿಕ ನೆಲೆಕಟ್ಟಿನಲ್ಲಿ ಕೆಲವರನ್ನು ಮೆರೆಸುವುದು ಮತ್ತು ಕೆಲವರನ್ನು ಪಕ್ಕಕ್ಕೆ ಸರಿಸುವುದು ಒಂದು ಸ್ವಾಭಾವಿಕ ಪ್ರಕ್ರಿಯೆ ಆಗಿದೆ. ಇದಕ್ಕೆ ಕಾರಣವನ್ನು ಹುಡುಕುವುದು ಜಟಿಲವಾದ ವಿಷಯ.ಇದೊಂದು 'ಅಸ್ವಸ್ಥ ಮನೋಧರ್ಮ' ಎಂದರೆ ತಪ್ಪಾಗುವುದಿಲ್ಲ..ಅನೇಕ ವೇಳೆ ಕೆಲವು ವಚನಗಳು, ಕೀರ್ತನೆಗಳು ಸಂಪೂರ್ಣ ಅರ್ಥವಾಗದೇ ಇರುವ ಕಾರಣಕ್ಕೂ ನಿರ್ಲಕ್ಷ್ಯಕ್ಕೆ ಒಳಗಾಗಿರಬಹುದು. ಆದರೆ ಅದರ ಕ್ಷಮತೆ ಉತ್ಕೃಷ್ಟವೇ ಇರಬಹುದು ಎಂದರು.

ಗೌರವ ಕೋಶಾಧಿಕಾರಿ ಪ್ರೊ. ಚಂದ್ರಶೇಖರ ನಾದೂರು ವಂದನಾರ್ಪಣೆ ಮಾಡಿದ ನಂತರ ಉಪನ್ಯಾಸ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ ೨೯/೦೬/೨೦೨೫, ಭಾನುವಾರ
## ಶ್ರೀ ಗೋವಿಂದ ಜಾಲಿಹಾಳ ದತ್ತಿ ಆಶ್ರಯದಲ್ಲಿ 'ಭಕ್ತಿಗೀತೆಗಳ ಗಾಯನ ಸ್ಪರ್ಧೆ'





ದತ್ತಿಯ ಸ್ಥಾಪನೆಯಿಂದ ಹಿಡಿದು ಇಲ್ಲಿಯವರೆಗಿನ ಹಿನ್ನೋಟವನ್ನು ಬಿ.ಎಸ್. ಗುರುಪ್ರಸಾದ್ ಸಭೆಗೆ ಪರಿಚಯಿಸಿದರು.

ಸ್ಪರ್ಧೆಯ ಕಾರ್ಯಕ್ರಮಕ್ಕೆ ನೆರೆದವರೆನ್ನೆಲ್ಲಾ ಡಾ. ಶಾಂತರಾಜು ಆದರದಿಂದ ಸ್ವಾಗತಿಸಿ ಪ್ರಾರಂಭಿಕ ನುಡಿಗಳನ್ನು ಆಡಿದ ನಂತರ ತೀರ್ಪುಗಾರರು ಸ್ಪರ್ಧಿಗಳಿಗೆ ಸೂಚನೆಗಳನ್ನು ನೀಡಿದರು. ಸ್ಪರ್ಧಿಗಳು ತಾವು ತಾಲೀಮು ಮಾಡಿದ್ದ ಭಕ್ತಿಗೀತೆಗಳನ್ನು ಶ್ರದ್ಧೆಯಿಂದ ಹಾಡಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ ಅವರು ಸ್ಪರ್ಧೆಯ ನಂತರ ಮಾತನಾಡುತ್ತಾ ಬಿ.ಎಂ.ಶ್ರೀ. ಪ್ರತಿಷ್ಠಾನ ಯಾವ ರೀತಿಯಲ್ಲಿ ಇಂತಹ ಸಂಗೀತ, ಭಕ್ತಿಗೀತೆಗಳ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುತ್ತಾ ಬರುತ್ತಿದೆ ಎಂಬ ಬಗ್ಗೆ ತಿಳಿಸಿ, ಇನ್ನೂ ಹೆಚ್ಚಿನ ಆಸಕ್ತಿಯಿಂದ ಸ್ಪರ್ಧಿಗಳು ಭಾಗವಹಿಸಿದರೆ ನಮಗೂ ಸಂತೋಷವಾಗುತ್ತದೆ ಎಂದರು.

ಸ್ಪರ್ಧೆಯನ್ನು ಇಬ್ಬರು ತೀರ್ಪುಗಾರರದ ಶ್ರೀಮತಿ ಸಿ.ವಿ. ಶ್ರೀಮತಿ ಮತ್ತು ಶ್ರೀಮತಿ ಸುಮಾ ಎಂ.ಸಿ. ಅವರು ನಡೆಸಿಕೊಟ್ಟರು. ಶ್ರೀ ಮಿಲಿಂದ್ ಜಿ. ಜಾಲಿಹಾಳ ಮತ್ತು ಮಾನಸಿ ದಂಪತಿಗಳು ಸ್ವತಃ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದುದು ಶೋಭೆಯನ್ನು ಉಂಟುಮಾಡಿತ್ತು. ತೀರ್ಪುಗಾರರು ಸ್ಪರ್ಧಿಗಳ ಭಕ್ತಿಗೀತೆಗಳ ಪ್ರದರ್ಶನದ ಬಗ್ಗೆ ಬೆಳಕು ಚೆಲ್ಲಿದರು.

**ಈ ಕೆಳಕಂಡ ಸ್ಪರ್ಧಿಗಳು ಬಹುಮಾನ ಸ್ವೀಕರಿಸಿದರು.**

೧. ಪ್ರಥಮ ಬಹುಮಾನ – **ಅಭಿನವ ಶ್ರೀನಿಧಿ ತಾಯೂರ್**

೨. ದ್ವಿತೀಯ ಬಹುಮಾನ – **ಭುವನ ಎ.**

೩. ತೃತೀಯ ಬಹುಮಾನ – **ರಾಘವೇಶ ಬಿ.**

೪. ಸಮಾಧಾನಕರ ಬಹುಮಾನ – **ಆದಿತ್ಯ ಶ್ರೀನಿಧಿ ತಾಯೂರ್, ಧಾತ್ರಿ ಕೆ. ಸ್ಮೃತಿ ಪುರೋಹಿತ್ ಮತ್ತು ವಿಶಾಲ್ ರಾಜ್**

ಚಂದ್ರಶೇಖರ್ ನಾದೂರು ಅವರ ವಂದನಾರ್ಪಣೆಯೊಂದಿಗೆ ಸ್ಪರ್ಧಾ ಕಾರ್ಯಕ್ರಮ ಮುಕ್ತಾಯವಾಯಿತು.

# ಬಿ.ಎಂ.ಶ್ರೀ. ಪ್ರತಿಷ್ಠಾನದ ಸರ್ವಸದಸ್ಯರ ಸಭೆ

**ಬಿ.ಎಂ.ಶ್ರೀ. ಪ್ರತಿಷ್ಠಾನ (ರಿ).**
ಬಿ.ಎಂ.ಶ್ರೀ. ಪ್ರತಿಷ್ಠಾನ ರಸ್ತೆ, ೩ನೇ ಮುಖ್ಯರಸ್ತೆ,
ನರಸಿಂಹರಾಜ ಕಾಲೋನಿ, ಬೆಂಗಳೂರು–೫೬೦೦೧೯

## ೪೫ನೇ ವಾರ್ಷಿಕ ಸರ್ವಸದಸ್ಯರ ಸಭೆಯ ತಿಳಿವಳಿಕೆ ಪತ್ರ

ಮಾನ್ಯರೇ,

ಬಿ.ಎಂ.ಶ್ರೀ. ಪ್ರತಿಷ್ಠಾನದ **ನಲವತ್ತೈದನೇ** ಸರ್ವಸದಸ್ಯರ ಸಭೆಯನ್ನು ದಿನಾಂಕ ೨೭–೦೭–೨೦೨೫ರಂದು ಭಾನುವಾರ ಬೆಳಗ್ಗೆ ೧೦–೩೦ಕ್ಕೆ ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣದಲ್ಲಿ ಡಾ.ಬೈರಮಂಗಲ ರಾಮೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಗುತ್ತದೆ. ತಾವು ದಯವಿಟ್ಟು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

### ಕಾರ್ಯಸೂಚಿ

೧. ಸ್ವಾಗತ ಮತ್ತು ಅಗಲಿದ ಸದಸ್ಯರಿಗೆ ಹಾಗೂ ಗಣ್ಯರಿಗೆ ಸಂತಾಪ ಸೂಚನೆ.
೨. ಸರ್ವಸದಸ್ಯರ ಸಭೆಯ ತಿಳಿವಳಿಕೆ ಪತ್ರವನ್ನು ಓದಿ ಸ್ಥಿರೀಕರಿಸುವುದು.
೩. ೨೦೨೪–೨೫ನೇ ಸಾಲಿನ ಆಡಳಿತ ವರದಿಯ ಮಂಡನೆ ಮತ್ತು ಪರಿಶೀಲನೆ ಹಾಗೂ ಅಂಗೀಕರಿಸುವುದು.
೪. ೨೦೨೪–೨೫ನೇ ಸಾಲಿನ ಲೆಕ್ಕಪರಿಶೋಧಕರು ದೃಢೀಕರಿಸಿದ ಲೆಕ್ಕಪತ್ರಗಳು ಮತ್ತು ವರದಿಗಳ ಮಂಡನೆ ಮತ್ತು ದೃಢೀಕರೀಸುವುದು.
೫. ೨೦೨೫–೨೬ನೇ ಸಾಲಿನ ಆಯ–ವ್ಯಯ ಅಂದಾಜು ಪಟ್ಟಿ ಮಂಡನೆ, ಪರಿಶೀಲನೆ ಹಾಗೂ ಅಂಗೀಕಾರ.
೬. ೨೦೨೫–೨೬ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವುದು.
೭. ಸದಸ್ಯರು ನಿಯಮಾನುಸಾರ ಕಳುಹಿಸಿರುವ ಸೂಚನೆಗಳನ್ನು ಮಂಡಿಸುವುದು.
೮. ಇತರ ವಿಚಾರಗಳು (ಅಧ್ಯಕ್ಷರ ಅನುಮತಿ ಮೇರೆಗೆ)
೯. ಅಧ್ಯಕ್ಷರ ಸಮಾರೋಪ ಭಾಷಣ
೧೦.ನಿಯಮಾನುಸಾರ ನಿವೃತ್ತರಾಗುತ್ತಿರುವ ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ಚುನಾವಣೆ.
೧೧.ವಂದನಾರ್ಪಣೆ.

### ಚುನಾವಣೆ ವೇಳಾಪಟ್ಟಿ

| | |
|---|---|
| * **ನಾಮಪತ್ರಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ** | **೦೪–೦೭–೨೦೨೫ ಶುಕ್ರವಾರ** |
| * **ನಾಮಪತ್ರಗಳನ್ನು ಸಲ್ಲಿಸಲುಕೊನೆಯ ದಿನಾಂಕ** | **೦೯–೦೭–೨೦೨೫ ಬುಧವಾರ** |
| * **ಉಮೇದುದಾರರ ಪತ್ರಗಳ ಪರಿಶೀಲನೆ ದಿನಾಂಕ** | **೧೨–೦೭–೨೦೨೫ ಶನಿವಾರ** |
| * **ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ದಿನಾಂಕ** | **೧೪–೦೭–೨೦೨೫ ಸೋಮವಾರ** |
| * **ಉಮೇದುವಾರಿಕೆ ಹಿಂಪಡೆಯುವ ದಿನಾಂಕ** | **೧೬–೦೭–೨೦೨೫ ಬುಧವಾರ** |
| * **ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಅಂತಿಮಪಟ್ಟಿ ಪ್ರಕಟಿಸುವ ದಿನಾಂಕ** | **೨೧–೦೭–೨೦೨೫ ಸೋಮವಾರ** |
| * **ಚುನಾವಣೆ ದಿನಾಂಕ** | **೨೭–೦೭–೨೦೨೫ ಭಾನುವಾರ** |

* ೨೦೨೨–೨೦೨೫ನೇ ಸಾಲಿಗೆ ಆಯ್ಕೆಯಾಗಿ ಈಗ ನಿವೃತ್ತರಾಗಲಿರುವ ಕಾರ್ಯಕಾರಿ ಸಮಿತಿ ಸದಸ್ಯರುಗಳ ಹೆಸರು

**೧. ಪ್ರೊ. ಜಿ. ಅಶ್ವತ್ಥನಾರಾಯಣ** **೨. ಪ್ರೊ. ಜಿ. ಅಬ್ದುಲ್ ಬಷೀರ್**
**೩. ಶ್ರೀಬಿ.ಆರ್. ರವೀಂದ್ರನಾಥ್** **೪. ಡಾ.ಎಸ್. ಅನಿಲ್ಕುಮಾರ್**
**೫. ಶ್ರೀಸಂಗಮೇಶ್ ಬಾದವಾಡಗಿ**

#### ವಿಶೇಷ ಸೂಚನೆ

೧. ಸದಸ್ಯರು ಬರುವಾಗ ತಮ್ಮ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು. ಗುರುತಿನ ಚೀಟಿಯನ್ನು ಪಡೆದಿಲ್ಲದವರು ದಿನಾಂಕ ೨೫–೦೭–೨೦೨೫ರ ಒಳಗೆ ಗುರುತಿನ ಚೀಟಿಯನ್ನು ಕಛೇರಿಯಿಂದ ಪಡೆಯಬಹುದು..
೨. ಸದಸ್ಯರು ಕಳುಹಿಸುವ ಸಲಹೆ ಸೂಚನೆಗಳನ್ನು ೨೧–೦೭–೨೦೨೫ ಸಂಜೆ : ೫.೩೦ ಗಂಟೆಗೆ ಮುಂಚೆ ಕಛೇರಿಗೆ ತಲುಪಿಸಬೇಕು.
೩. ಆಡಳಿತ ವರದಿ ಮತ್ತು ಲೆಕ್ಕ ಪತ್ರಗಳ ಪ್ರತಿಯನ್ನು ಪ್ರತಿಷ್ಠಾನದ ಕಛೇರಿ ಸಮಯದಲ್ಲಿ ಪಡೆಯಬಹುದು.
೪. ಕಚೇರಿಗೆ ವಾರದ ರಜಾದಿನ ಭಾನುವಾರ ಆಗಿರುತ್ತದೆ.
೫. ಮತದಾನ ಮಾಡಲು ಚುನಾವಣೆ ದಿನಾಂಕ ೨೫.೦೭.೨೦೨೫ಕ್ಕೆ ಕನಿಷ್ಠ ಒಂದು ವರ್ಷ ಪೂರೈಸಿರಬೇಕು.
೬. ಸದಸ್ಯರು ಕಾರ್ಯಕಾರಿ ಸಮಿತಿಗೆ ಸ್ಪರ್ಧಿಸಲು ಕನಿಷ್ಠ ೫ ವರ್ಷವಾಗಿರಬೇಕು.
೭. ೨೬.೦೭.೨೦೨೪ಕ್ಕೆ ಮುಂಚೆ ಸದಸ್ಯತ್ವ ಪಡೆದವರು ಮಾತ್ರ ಮತದಾನದ ಹಕ್ಕು ಹೊಂದಿರುತ್ತಾರೆ ಹಾಗೂ ೨೬.೦೭.೨೦೨೦ರ ಮುಂಚೆ ಸದಸ್ಯರಾಗಿರುವವರು ಮಾತ್ರ ಚುನಾವಣೆಗೆ ಸ್ಪರ್ಧಿಸಬಹುದು.
೮. ಮತದಾನ ಮಾಡುವ ಸದಸ್ಯರು ಚುನಾವಣಾ ಸ್ಪರ್ಧಿಗಳಲ್ಲಿ ೫ ಮಂದಿಗೆ ಕಡ್ಡಾಯವಾಗಿ ಮತಹಾಕಬೇಕು. ೫ಕ್ಕಿಂತ ಕಡಿಮೆ ಅಥವಾ ಹೆಚ್ಚು ಮತಚಲಾಯಿಸಿದರೆ ಆ ಮತಪತ್ರ ಅಸಿಂಧುವಾಗುತ್ತದೆ

**ದಿನಾಂಕ: ೩೦–೦೬–೨೦೨೫**
**ಸೋಮವಾರ**

**ಕಾರ್ಯಕಾರಿ ಸಮಿತಿಯ ಅಪ್ಪಣೆಯ ಮೇರೆಗೆ**

**ಡಾ. ಶಾಂತರಾಜು**
ಗೌರವ ಕಾರ್ಯದರ್ಶಿ

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 30-06-2025

### ಹಸ್ತಪ್ರತಿ/ಗ್ರಂಥಾಲಯ ವಿಭಾಗದ ವಿಶೇಷ ವರದಿ

## ‘ರಾಷ್ಟ್ರ ಮಟ್ಟದಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಗೌರವ’



ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಸಂರಕ್ಷಿಸಿ ಇಡಲಾಗಿರುವ ಪ್ರಾಚೀನ ಹಸ್ತಪ್ರತಿಗಳ ಮಹತ್ವ ಈಗ ದೆಹಲಿಗೆ ಮುಟ್ಟಿದೆ.ರಾಷ್ಟ್ರಪತಿ ಭವನದಲ್ಲಿರುವ ಗ್ರಂಥಾಲಯ/ಹಸ್ತಪ್ರತಿ ಸಂಗ್ರಹಾಲಯದಲ್ಲಿ ಪ್ರತಿಷ್ಠಾನದ ಸಂಗ್ರಹದಲ್ಲಿರುವ ಕನ್ನಡದ ಹಸ್ತಪ್ರತಿ ಗ್ರಂಥವೊಂದನ್ನು ಪ್ರದರ್ಶಿಸಬೇಕೆಂದು ಬಂದ ಮನವಿಯಂತೆ ಭಾಮಿನಿ ಷಟ್ಪದಿಯಲ್ಲಿರುವ ‘ಅಧ್ಯಾತ್ಮ ರಾಮಾಯಣ’ ಗ್ರಂಥದ ಇಂಗ್ಲಿಷ್‌ನ ವರ್ಣನಾತ್ಮಕ ಸೂಚಿ, ಕೃತಿಯ ಸಂಕ್ಷಿಪ್ತ ವಿವರಣೆ ಹಾಗೂ ಡಿಜಿಟಲೈಸ್ಡ್ ಪ್ರತಿಯನ್ನು ರಾಷ್ಟ್ರಪತಿ ಭವನದ ಪ್ರತಿನಿಧಿಯಾಗಿ ಬಂದಿದ್ದ ತಾಂತ್ರಿಕ ಅಧಿಕಾರಿ ಸೂರಜ್ ಕುಮಾರ್ ಅವರಿಗೆ ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂರಕ್ಷಕ ಬಿ.ಎಸ್.ಗುರುಪ್ರಸಾದ್ ಅವರು, ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ, ಕಾರ್ಯದರ್ಶಿ ಶಾಂತರಾಜು ಅವರ ಸಮ್ಮುಖದಲ್ಲಿ ಹಸ್ತಾಂತರಿಸಿದರು.

## ಪ್ರಸ್ತುತ ತಿಂಗಳ ಅಂಗಳ

**೦೬.೦೭.೨೦೨೫ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ**

**ಕಂಬತ್ತಳ್ಳಿ ಜೀವಣ್ಣ – ಪದ್ಮಾವತಮ್ಮ ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ**

ಪ್ರಶಸ್ತಿ ಪ್ರದಾನ ಮಾಡುವವರು : ಪದ್ಮರಾಜ ಎನ್. ದೇಸಾಯಿ
ನಿವೃತ್ತ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ
ಪ್ರಶಸ್ತಿ ಪುರಸ್ಕೃತರು : ಎಸ್. ಜಿತೇಂದ್ರಕುಮಾರ್
ಮುಖ್ಯ ಅತಿಥಿ : ನಾಡೋಜ ಡಾ. ಹಂಪ. ನಾಗರಾಜಯ್ಯ
ಅಭಿನಂದನ ನುಡಿ : ಡಾ. ಪದ್ಮಿನಿ ನಾಗರಾಜ್

**೧೬.೦೭.೨೦೨೫ ಬುಧವಾರ ಸಂಜೆ ೫.೦೦ ಗಂಟೆಗೆ**

**ರಾಸ ಸಾಹಿತ್ಯ ಮತ್ತು ಸಮೇತನಹಳ್ಳಿ ರಾಮರಾವ್, ಪ್ರೊ.ಡಿ. ಲಿಂಗಯ್ಯ, ಟಿ.ಎಸ್.ವೆಂಕಣ್ಣಯ್ಯ, ತೀ.ನಂ.ಶ್ರೀ., ಶಾರದಮ್ಮ ಹನುಮಯ್ಯ ದತ್ತಿ ಸಂಯುಕ್ತ ಆಶ್ರಯದಲ್ಲಿ ಉಪನ್ಯಾಸ**

ವಿಚಾರ ಮಂಡನೆ : ಡಾ. ಟಿ.ಕೆ. ಕೆಂಪೇಗೌಡ
ವಿಷಯ : ಜಾನಪದ ಸಂಶೋಧನಾ ಕ್ಷೇತ್ರಕ್ಕೆ ಡಿ. ಲಿಂಗಯ್ಯ ಅವರ ಕೊಡುಗೆ

**೨೩.೦೭.೨೦೨೫ ಬುಧವಾರ ಸಂಜೆ ೫.೦೦ ಗಂಟೆಗೆ**

**ಶ್ರೀಮತಿ ಜಯಲಕ್ಷ್ಮಮ್ಮ ಬಾಪು ರಾಮಣ್ಣ ಮತ್ತು ಬಾಪು ರಾಮಣ್ಣ ದತ್ತಿ – ಗಮಕ ವಾಚನ ಮತ್ತು ವ್ಯಾಖ್ಯಾನ**

ವಿಷಯ : ಶ್ರೀರಾಮಾಯಣ ದರ್ಶನಂ – ಆಯ್ದ ಭಾಗ
ವಿದುಷಿ ಡಾ. ಶ್ಯಾಮಲಾ ಪ್ರಕಾಶ್

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :

**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭